ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಂತ್ರಿಗಳು ಉತ್ತರಕೊಡುತ್ತ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಯನ್ನು ಮಾಡಬೇಕಾದರೆ ಜಾಗವನ್ನು ಮುಫತ್ತಾಗಿ ರೈತರು ಕೊಡುತ್ತಾರೆ ಎಂದು ಹೇಳಿದರು. ರಸ್ತೆಗಳಿಗೆ ಕೆಲವರು ಜಮೀನು ಬಿಟ್ಟು ಯಾರೋ ಒಬ್ಬ ಸ್ವಲ್ಪ ಜಾಗವನ್ನು ಕೊಡದೆ ತಡೆದು ರಸ್ತೆ ಮಾಡುವುದಕ್ಕೆ ತೊಂದರೆಯಾಗುವಂಥ ಸಂದರ್ಭದಲ್ಲಿ ಆ ಜಮೀನನ್ನು ಪೂರ್ತಿಯಾಗಿ ಆಕ್ಕ್ಯೈರ್ ಮಾಡಿಕೊಂಡು ರಸ್ತೆಮಾಡುವುದು ಒಳ್ಳೆಯದಲ್ಲವೇ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಆರ್ಥ ಏನಾಗುತ್ತದೆ ಎಂದರೆ, ಕೆಲವರು ಮಾತ್ರ ಪುಕ್ಕಟೆಯಾಗಿ ಜಮೀನು ಕೊಟ್ಟು ತಕರಾರು ಮಾಡಿದವನಿಗೆ ದುಡ್ಡು ಕೊಟ್ಟ ಹಾಗೆ ಆಗುತ್ತದೆ. ಅದರ ನಲುವಾಗಿ ಇದು ಹಳ್ಳಿಯವರಿಗೆ ಅನುಕೂಲವಾಗುವ ಕೆಲಸವಾಗಿರುವುದರಿಂದ ಅಂಥವರ ಮೇಲೆ ಒತ್ತಾಯವನ್ನು ಹಾಕಿ ಜಮೀನು ಬಿಟ್ಟು ಕೊಡುವಂತೆ ಮಾಡಬೇಕು. ಸರ್ಕಾರದವರು ಕಾಂಪೆನಸೇಷನ್ ಕೊಡುತ್ತ ಹೋದರೆ ಪ್ರತಿಯೊಬ್ಬರೂ ಜಮೀನನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳುತ್ತಾರೆ. ದುಡ್ಡು ತಗೆದುಕೊಳ್ಳದೆ ಜಮೀನು ಕೊಟ್ಟರೂ ರಸ್ತೆಯನ್ನು ಮಾಡುವಂಥ ಪರಿಸ್ಥಿತಿ ಇಲ್ಲ ಎಂದು ಹೇಳುವಾಗ ಜಮೀನಿಗೆ ಪರಿಹಾರ ಕೊಡುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಒಂದೆರಡು ಮೈಲಿ ರಸ್ತೆಗೆ ಎಲ್ಲರೂ ಜಮೀನನ್ನು ಪೂರ್ತಿಯಾಗಿ ಬಿಟ್ಟುಕೊಟ್ಟು ಯಾರೋ ಒಬ್ಬರು ತಡೆಮಾಡಿದರೆ ಅಂಥ ಸಂದರ್ಭದಲ್ಲಿ ಸರ್ಕಾರದವರು ಏನು ಮಾಡುತ್ತಾರೆ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಆ ಸಂದರ್ಭದಲ್ಲಿ ಶಕ್ಯವಾದಷ್ಟೂ ಅವನನ್ನು ಬಿಟ್ಟುಕೊಡುವಂತೆ ಊರಿನವರೆಲ್ಲ ಸೇರಿ ಕೇಳಬೇಕು. ಊರಿನವರಿಗೆ ಅನುಕೂಲವಾಗಿರುವುದರಿಂದ ಅವನ ಮೇಲೆ ಪ್ರಭಾವವನ್ನು ಬೀರಿ ಜಮೀನನ್ನು ಬಿಡಿಸಿಕೊಡಬೇಕು.

Mr. SPEAKER.—It is purely a hypothetical question.

ಶ್ರೀ ವಿ. ಎಂ. ದೇವ್.—ರಸ್ತೆಗಳನ್ನು ಮಾಡಲು 66 ಅಡಿ ಅಗಲ ಸ್ಥಳ ಬೇಕು ಎಂದರೆ ಈಗಿನ ಸ್ಥಿತಿಗತಿಗಳಲ್ಲಿ ಜಮೀನನ್ನು ಬಿಟ್ಟುಕೊಡುವುದಕ್ಕೆ ಕಷ್ಟವಾಗುತ್ತದೆ. ಆ ರಸ್ತೆಗಳ ಮೇಲೆ ವಾಹನಗಳ ಒತ್ತಡ ಕಡಮೆ ಇರುವುದರಿಂದ ಅಷ್ಟು ಅಗಲ ರಸ್ತೆ ಬೇಕಾಗುವುದಿಲ್ಲ. ಆದ್ದರಿಂದ ರಸ್ತೆಯ ಅಗಲವನ್ನು ಕಡಮೆ ಮಾಡುವುದನ್ನು ಪರಿಶೀಲನುತ್ತೀರಾ ಸ್ವಾಮಿ ?

Mr. SPEAKER.—How does it arise here ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಗ್ರಾಮದವರು ಪ್ರಭಾವ ಬೀರಿ ಜಮೀನು ಕೊಡಿಸಬೇಕು ಎಂದು ಹೇಳಿದರು. ಆದರೂ ಕೂಡ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ಇದೆ, ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದಾಗ ಹೇಗೆ ಮಾಡುತ್ತೀರಿ ಸ್ವಾಮಿ ?

Mr. SPEAKER.—It is also hypothetical. It has already been answered.

Sri S. SIVAPPA.—Sir, I request the Chair to put Question No. 319 because there is still time available.

Mr. SPEAKER.—It was passed over for the second time. There is the calling attention motion. Under the rules, if another member wants to put a Question, there must be a written authority for the Member who puts the question; Even a general authority will not do. There is no such authority and therefore I cannot allow.

Sri S. SIVAPPA.—It is within your discretion, Sir, and I request you to put it.

Mr. SPEAKER.—Why did not the Hon'ble Member ask for it, in advance ? Anyway, I will put this Question

---

Minor Irrigation Works in Hassan.

*Q.—319. Sri H. R. KESHAVA MURTHY (Gandasi).—

Will the Government be pleased to state :—

(*a*) the number of estimates of minor irrigation works pending with the Executive Engineer, Hassan, without being sanctioned ;

(*b*) the amount of these estimates;

(*c*) the names of the works and when estimates for them were prepared;

(*d*) the action they propose to take to commence the works of the tanks for which estimates are ready;

(*e*) whether there is any proposal to include them in the 1965 Budget?

A.—Sri ALUR HANUMANTHAPPA (Deputy Minister for Minor Irrigation).—

(*a*) 175.

(*b*) Rs. 17 lakhs.

(*c*) *Vide* statement placed on the table of the House.*

(*d*) Feasible works will be taken up subject to availability of adequate funds to meet the need of spillover and fresh works too.

(*e*) No.

Sri S. SIVAPPA.—Supplementary to (e): Why this emphatic answer 'No'?

† Sri ALUR HANUMANTHAPPA.—We have got huge commitments. We have a number of works on hand at present the total estimated cost of which comes to Rs. 12 crores and we have been advised by the Central Government to see that the spillover works are completed first. That is why I have stated here that for the year 1965, we have not proposed any works to be taken up in Hassan Division.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಾಸನ ಎಕ್ಸಿಕ್ಯೂಟಿವ್ ಇಂಜಿನಿಯರ ಆಫೀಸಿನಲ್ಲಿ ಒಂದೆರಡು ವರ್ಷದಿಂದ ಎಷ್ಟು ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿಸಿವ್ವಾರೆ ಸ್ವಾಮಿ?

Mr. SPEAKER.—I think this Question was put by the Hon'ble Member himself.

Sri ALUR HANUMANTHAPPA.—In Hassan Division, the spillover commitment was Rs. 1,00,95,000 upto 1964 and the outlay was Rs. 48.26 lakhs. The spill over commitment till now is about Rs. 61 lakhs.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಒಂದು ವರ್ಷದಿಂದಲೂ ಯಾವ ಹೊಸ ನೀರಾವರಿ ಕೆಲಸವನ್ನೂ ತೆಗೆದುಕೊಳ್ಳಕೂಡದು ಎಂದು ಹಾಸನ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಆದೇಶವನ್ನು ಏನಾದರೂ ಕೊಟ್ಟಿದ್ದೀರಾ ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಸ್ಪಿಲ್ ಓವರ್ ವರ್ಕ್ಸ್ ಜಾಸ್ತಿ ಇತ್ತು. ಇದಕ್ಕಾಗಿ 64-65ರಲ್ಲಿ ಇದ್ದಂಥ ಹಣ ಎರಡೂವರೆ ಕೋಟಿ ರೂಪಾಯಿ. ಹೆಚ್ಚಾಗಿ ಬರುವ ಒಂದೂವರೆ ಕೋಟಿ ರೂಪಾಯಿ ಸೇರಿ ನಾಲ್ಕು ಕೋಟಿ ರೂಪಾಯಿ ಆಗುತ್ತದೆ. ಇದನ್ನೆಲ್ಲ ಸ್ಪಿರ್ ಓವರ್ ವರ್ಕ್ಸ್‌ಗಾಗಿ ಖರ್ಚು ಮಾಡಬೇಕಂದು ಹೊಸ ಕೆಲಸಗಳನ್ನು ಯಾವುದನ್ನೂ ಈ ವರ್ಷ ತೆಗೆದುಕೊಳ್ಳುವುದಕ್ಕೆ ಅಸಾಧ್ಯವಾದೀತು ಎಂದು ಸರ್ಕಾರ ಆದೇಶ ಕೊಟ್ಟಿದೆ.

* Copy placed in the Mysore Legislature Library No.,,Dt.,,,.

Sri S. SIVAPPA.—The Minister was pleased to state that Government have asked the Executive Engineer not to take up any fresh works. But here according to the statement given by the Government, they are not fresh works, but works like filling up the breach or restoring damaged tanks.

Sri ALUR HANUMANTHAPPA.—There is no restriction at all in taking up such works. They can take up anywhere any such work looking to their urgency and see that the breach is filled and restoration is effected without any delay.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಳೆಯ ಕೆಲಸಗಳು ಹಣದ ಅಭಾವದಿಂದ ನಿಂತಿವೆ ಎಂದು ಹೇಳಿದರು. ನನ್ನ ಪ್ರಶ್ನೆಗೆ ಉತ್ತರವಾಗಿ ಹಳೆಯ ಕೆಲಸಗಳು ಹೆಚ್ಚಾಗಿ ಮಾಡುವುದು ಉಳಿದಿರುವುದರಿಂದ ಹಣವನ್ನು ಹೊಸ ಕೆಲಸಗಳಿಗೆ ಒದಗಿಸಿಲ್ಲ ಎಂದು ಹೇಳಿದರು. ಈಗ ಹೊಸ ಕೆಲಸಗಳಿಗೆ ಹಣವಿಲ್ಲ ಎಂದು ಮಂಜೂರು ಮಾಡುತ್ತಿಲ್ಲವೇ? ಅಥವಾ ಹಿಂದಿನ ಕೆಲಸಗಳು ಹೆಚ್ಚಾಗಿವೆ ಎಂದು ಮಂಜೂರು ಮಾಡುತ್ತಿಲ್ಲವೇ ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಎರಡು ಕಾರಣಗಳೂ ಇವೆ. 61 ಲಕ್ಷ ರೂಪಾಯಿಯ ಹಳೆಯ ಕೆಲಸಗಳು ಹಾಸನ ಡಿವಿಜನ್ನಿನಲ್ಲಿವೆ. ಈಗ ಹಣದ ಅಭಾವ ಸ್ವಲ್ಪಮಟ್ಟಿಗೆ ಇದೆ, ಹೊಸ ಕೆಲಸಗಳನ್ನು ಮುಂದಿನ ವರ್ಷದವರೆಗೂ ತಡೆ ಹಿಡಿಯಬೇಕೆಂದು ಆದೇಶವನ್ನು ಕೊಡಲಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಹಾಸನ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆಲಸ ಹೆಚ್ಚಾಗಿರುವುದರಿಂದ, ಎಂಟು ಸಾವಿರ ಕೆರೆಗಳು ಇರುವುದರಿಂದ, ಒಂದು ವರ್ಷದಿಂದಲೂ ನೀರಾವರಿ ಯೋಜನೆಗಳಿಗೆ ಒಂದು ಕಾಸನ್ನೂ ಒದಗಿಸದೆ ಇರುವುದರಿಂದ ಹೆಚ್ಚಿನ ಬೆಳೆಗೆ ಹೇಗೆ ಪ್ರೋತ್ಸಾಹ ಕೊಡುತ್ತೀರಿ ಮತ್ತು ಆಹಾರ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ಒಂದು ವಿಷಯವನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. 20 ಸಾವಿರಕ್ಕೆ ಮೇಲ್ಪಟ್ಟು ಖರ್ಚಾಗುವ ಎಲ್ಲ ಕೆಲಸಗಳೂ ಬಜೆಟ್ಟಿನಲ್ಲಿ ಬರುತ್ತವೆ. ಸರ್ಕಾರದ ಮಂಜೂರಾತಿಯನ್ನು ಪಡೆಯದೆ ಯಾವ ಕೆಲಸವನ್ನೂ ಪ್ರಾರಂಭ ಮಾಡುವ ಹಾಗಿಲ್ಲ. ನಾವು ಕೆಲಸವನ್ನು ನಿಲ್ಲಿಸಿರಿ, ತೆಗೆದುಕೊಳ್ಳಿರಿ ಎಂದು ಹೇಳುವಂಥ ಪ್ರಶ್ನೆ ಇಲ್ಲ. 20 ಸಾವಿರಕ್ಕೆ ಒಳಗಡೆ ಖರ್ಚಾಗುವುದಕ್ಕೆ ಲಂಪ್‌ಸಮ್ ಹಣವನ್ನು ಒದಗಿಸುತ್ತೇವೆ. ಅದರಲ್ಲಿ ಸರ್ಕಲ್‌ಗಳಿಗೆ ಕೊಡುತ್ತೇವೆ, ಅವರು ಡಿವಿಜನ್ನುಗಳಿಗೆ ಹಂಚುತ್ತಾರೆ. ಈಗ ಮೂರು ನಾಲ್ಕು ವರ್ಷದಿಂದ ನಾವು ನೋಡುತ್ತಿದ್ದೇವೆ, ಲೆಕ್ಕ ತಪ್ಪಿಸುವುದು ಇಂಜಿನಿಯರುಗಳು ಒಂದು ಡಿವಿಜನ್ನಿನಲ್ಲಿ 50 ಸಾವಿರ ರೂಪಾಯಿಗಳನ್ನು ಒದಗಿಸಿದ್ದರೆ ಹತ್ತು ಲಕ್ಷ ರೂಪಾಯಿಗಳಷ್ಟು ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಇದು ನಮ್ಮ ಗಮನಕ್ಕೆ ಬಂದಿದೆ. 50 ಸಾವಿರ ರೂಪಾಯಿ ಒದಗಿಸಿರುವ ಕಡೆ ಒಂದು ಲಕ್ಷದವರೆಗೂ ಕೆಲಸವನ್ನು ತೆಗೆದುಕೊಂಡಲ್ಲಿ, ಒಂದೂವರೆ ಲಕ್ಷದವರೆಗೂ ಕೆಲಸವನ್ನು ತೆಗೆದುಕೊಂಡಲ್ಲಿ ತೊಂದರೆ ಇಲ್ಲ. ಆದರೆ ಹತ್ತು, ಹದಿನೈದು ಲಕ್ಷದವರೆಗೂ ಎಲ್ಲ ಕೆಲಸವನ್ನೂ ಅಲ್ಲಲ್ಲಿ ಮಾಡುತ್ತಹೋದರು. ಇದರಿಂದ ಸರ್ಕಾರಕ್ಕೆ ಸ್ವಲ್ಪ ಕಷ್ಟ ಪರಿಸ್ಥಿತಿ ಬಂದುದಕ್ಕಾಗಿ ಇನ್ನು ಮುಂದೆ ಲಂಪ್‌ಸಂ ಪ್ರಾವಿಷನ್‌ನಲ್ಲಿ ಕೆಲಸಕಾರ್ಯಗಳನ್ನು ಸರ್ಕಾರದ ಮಂಜೂರಾತಿ ಇಲ್ಲದೆ ತೆಗೆದುಕೊಳ್ಳಬಾರದು ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಇದು ಹಾಸನ ಜಿಲ್ಲೆಗೆ ಮಾತ್ರ ಅನ್ವಯಿಸತಕ್ಕುದಲ್ಲ, ಇಡೀ ರಾಜ್ಯಕ್ಕೇ ಅನ್ವಯಿಸುತ್ತದೆ.

CALLING ATTENTION TO A MATTER OF URGENT PUBLIC IMPORTANCE UNDER RULE 1963.

Fire Accident at Chagachagere Village, Channapatana Taluk.

2-00 P.M.

Sri B. J. LINGE GOWDA (Channapatna).—I beg to call attention of the Hon'ble Minister for Home to the fire accident occurred at Chagachagere village, Channapatana Taluk, on 27th Ferbuary 1965,